ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್ ಇವರು ನಿಯಮ-330ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಹೇಳಿಕೆ:

ಪ್ರಶ್ನೆ:

ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಭಾಗಗಳಲ್ಲಿ ಕೋತಿ ನವಿಲು, ಕಾಡುಹಂದಿ ಮುಳ್ಳುಹಂದಿ, ಕಾಡುಕೋಣ ಮುಂತಾದ ಕಾಡುಪ್ರಾಣಿಗಳ ನಿರಂತರ ಹಾವಳಿಯಿಂದಾಗಿ ಅಪಾರ ಪ್ರಮಾಣದಲ್ಲಿ ಹಾನಿಯಾಗುತ್ತಿದ್ದು, ಬೆಳೆಗಾರರು ಅತ್ಯಂತ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕೋತಿ, ನವಿಲು, ಕಾಡುಹಂದಿ, ಮುಳ್ಳುಹಂದಿ, ಕಾಡುಕೋಣ ಮುಂತಾದ ಕಾಡುಪ್ರಾಣಿಗಳು ವಿವಿಧ ರೀತಿಯಲ್ಲಿ ಫಸಲಿಗೆ ಹಾನಿ ಮಾಡುತ್ತಿರುವ ಕಾರಣದಿಂದಾಗಿ ಇಳುವರಿ ಗಣನೀಯವಾಗಿ ಕುಸಿದು ತಮ್ಮ ಆದಾಯದ ಬಹುಪಾಲನ್ನು ಕಳೆದುಕೊಂಡು ಸರಿಯಾದ ಪರಿಹಾರ ಸಿಗದೇ ಕೃಷಿಕರು ಆರ್ಥಿಕವಾಗಿ ಅತ್ಯಂತ ಸಂಕಷ್ಟಕ್ಕೆ ಗುರಿಯಾಗಿದ್ದು ಈ ತೊಂದರೆ ನಿವಾರಣೆಗೆ ಸರ್ಕಾರ ಇದುವರೆಗೆ ಯಾವುದೇ ಸೂಕ್ತ ಕ್ರಮಗಳನ್ನು ಕೈಗೊಳ್ಳದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

ಹೇಳಿಕೆ:

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವನ್ಯಪ್ರಾಣಿ ದಾಳಿಯಿಂದ ಹಾನಿಗೊಳಗಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶಗಳ ಸಂಖ್ಯೆ: 1) ಅಪಜೀ/156/ಎಫ್‌ಡಬ್ಲ್ಯುಎಲ್/2022, ದಿನಾಂಕ:18-01-2023 (ಬೆಳೆ ಹಾನಿ ಪ್ರಕರಣ), 2) ಅಪಜೀ/114/ಎಫ್‌ಡಬ್ಲ್ಯುಎಲ್/2022 ದಿನಾಂಕ:15-12-2022 (ಮಾನವ ಗಾಯ), 3)ಅಪಜೀ/114/ ಎಫ್‌ಡಬ್ಲ್ಯುಎಲ್/2022 ದಿನಾಂಕ:29-04-2025 (ಮಾನವ ಸಾವು ಪ್ರಕರಣ) ಗಳನ್ವಯ ಪರಿಹಾರವನ್ನು ನೀಡಲಾಗುತ್ತಿದೆ.

ಕೃಷಿಕರಿಗೆ ಪರಿಹಾರ ಧನವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕಳೆದ 03 ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋತಿ, ನವಿಲು, ಕಾಡುಹಂದಿ, ಮುಳ್ಳುಹಂದಿ, ಕಾಡುಕೋಣ ಮುಂತಾದ ವನ್ಯಪ್ರಾಣಿಗಳಿಂದ ಹಾನಿಯಾದ ಪ್ರಕರಣಗಳಿಗೆ ಪಾವತಿಸಲಾದ ಪರಿಹಾರ ಮೊತ್ತದ ವಿವರ ಈ ಕೆಳಕಂಡಂತಿದೆ: -

| ಕ್ರ ಸಂ | ವರ್ಷ | ಬೆಳೆ ಪರಿಹಾರ | |
|---|---|---|---|
| | | ಪ್ರಕರಣ | ಮೊತ್ತ (ರೂ.ಗಳಲ್ಲಿ) |
| 1 | 2022-23 | 24 | 2,85,720/- |
| 2 | 2023-24 | 34 | 5,85,151/- |
| 3 | 2024-25 | 49 | 10,19,478/- |
| 4 | 2025-26 | 29 | 4,58,549/- |

ವನ್ಯಜೀವಿಗಳಿಂದ ರೈತರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಮಂಗಗಳ ಉಪಟಳದಿಂದ ಕೃಷಿ / ತೋಟಗಾರಿಕೆ ಬೆಳೆಗಳಿಗೆ ಹಾನಿ ಮಾಡುತ್ತಿರುವ ವಿಚಾರದ ಕುರಿತು ಸ್ಥಳೀಯ ಗ್ರಾಮಸ್ಥರು ದೂರವಾಣಿ ಕರೆ ಮಾಡಿ ಸಿಬ್ಬಂದಿಗಳಿಗೆ ತಿಳಿಸಿದಾಗ ಸದರಿ ಮಂಗಗಳನ್ನು ಕಾಡಿಗೆ ಹಿಮ್ಮೆಟ್ಟಿಸಲು ಅವಶ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಸುಧಾರಿತ ಬೋನುಗಳನ್ನು ಇರಿಸಿ ಮಂಗಗಳನ್ನು ಹಿಡಿದು ಸೂಕ್ತ ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
2. ನಾಡಿಗೆ ಬಂದ ವನ್ಯಪ್ರಾಣಿಗಳನ್ನು ರಕ್ಷಿಸಲು ಸುಧಾರಿತ ಬೋನುಗಳನ್ನು ಉಪಯೋಗಿಸಲಾಗುತ್ತಿದೆ.

3. ವನ್ಯಪ್ರಾಣಿಗಳಿಗೆ ಅರಿವಳಿಕೆ ಚುಚ್ಚುಮದ್ದನ್ನು ಪ್ರಯೋಗಿಸಲು ಅತ್ಯಾಧುನಿಕ Tranquilisation Gun ಉಪಯೋಗಿಸಲಾಗುತ್ತಿದೆ.
4. ವೈದ್ಯರು ವನ್ಯಪ್ರಾಣಿಗಳನ್ನು ತಪಾಸಣೆ ನಡೆಸಿ ಅರ್ಹತಾ ಪ್ರಮಾಣ ಪತ್ರ ನೀಡಿದ ನಂತರ ಮೈಕ್ರೋ ಚಿಪ್ಪನ್ನು ಅಳವಡಿಸಿ, ಕಿವಿಗೆ ಒತ್ತು ಗುರುತು ಅಳವಡಿಸಿ ದಟ್ಟವಾದ ಅರಣ್ಯಕ್ಕೆ ಬಿಡಲು ಕ್ರಮಕೈಗೊಳ್ಳಲಾಗುತ್ತಿದೆ.

<u>ಮಾನವ ಹಾಗೂ ಕಾಡಾನೆಗಳ ಸಂಘರ್ಷ ನಿಯಂತ್ರಿಸಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.</u>

1. ಕಾಡಾನೆಗಳ ಹಾವಳಿ ಹೆಚ್ಚಾಗಿರುವ ಪ್ರದೇಶದಲ್ಲಿ ಜನ ಸಂಪರ್ಕ ಸಭೆಯನ್ನು ಕರೆದು ಜನರಲ್ಲಿ ಅರಿವು ಮೂಡಿಸಿ, ವನ್ಯಪ್ರಾಣಿಗಳ ಬಗ್ಗೆ ಜಾಗೃತಿ ಹಾಗೂ ಸಹಬಾಳ್ವೆ ಮೂಡಿಸುವ ಸಭೆ / ಕಾರ್ಯಾಗಾರವನ್ನು ಏರ್ಪಡಿಸುವುದು.
2. ಬೆಳೆ ಹಾನಿ ಪ್ರಕರಣಗಳಲ್ಲಿ ಕೂಡಲೇ ಸರ್ಕಾರದ ಆದೇಶದ ಪ್ರಕಾರ ಪರಿಹಾರವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಪಾವತಿಸುವುದು.
3. ರೈತರಿಗೆ ಸಬ್ಸಿಡಿ ದರದಲ್ಲಿ ಸೋಲಾರ್ ಬೇಲಿ ನಿರ್ಮಾಣ ಮಾಡಲು ಉತ್ತೇಜನ ನೀಡಲಾಗುತ್ತಿದೆ ಹಾಗೂ ಅರಣ್ಯದ ಅಂಚಿನಲ್ಲಿ ಬರುವ ಖಾಸಗಿ ಜಮೀನುಗಳ ಸುತ್ತಾ ಸರ್ಕಾರದ ವತಿಯಿಂದ ದೊರಕುವ ಶೇ. 50 ಸಬ್ಸಿಡಿಯನ್ನು ಬಳಸಿಕೊಂಡು ಸೌರಶಕ್ತಿ ಬೇಲಿಯನ್ನು ನಿರ್ಮಿಸಲಾಗುತ್ತಿದೆ.
4. ಅರಣ್ಯ ರಕ್ಷಣೆ ಕ್ಯಾಂಪಿನ ಸಿಬ್ಬಂದಿಗಳನ್ನು ಆನೆ ಹಾವಳಿ ಸಮಯದಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ.
5. ಆನೆ ನಿರೋಧಕ ಕಂದಕ ತೋಡುವುದು, ಹಳ್ಳ ತೊರೆಗಳು ಬರುವಲ್ಲಿ ವಿಶೇಷ ವಿನ್ಯಾಸದ ಕಾಂಕ್ರಿಟ್ ರಚನೆ ಮತ್ತುಸೋಲಾರ್ ಟೆಂಟೆಕಲ್ ಬೇಲಿಯನ್ನು ಮಾಡಲಾಗುತ್ತದೆ.
6. ಮಡಿಕೇರಿ ವಿಭಾಗದಿಂದ ಎಲಿಫೆಂಟ್ ಟ್ರಾಕರ್ಸ್‌ಗಳನ್ನು ಕರೆಸಿ ಹಾಗೆಯೇ, ನಾಗರಹೊಳೆ / ಮಡಿಕೇರಿ ವಿಭಾಗಗಳಿಂದ ನುರಿತ ಆನೆ ಕಾವಡಿಗಳನ್ನು ಮತ್ತು ವೈದ್ಯರನ್ನು ಕರೆಯಿಸಿ ಊರಿಗೆ ಬಂದ ಕಾಡಾನೆಯನ್ನು ಕಾಡಿಗೆ ಹಿಮ್ಮೆಟ್ಟಿಸಿರುವ ಹಾಗೂ ಸೆರೆಹಿಡಿಯುವ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.
7. ಆನೆ ಸಂಚರಿಸುವ ಪ್ರದೇಶಗಳಲ್ಲಿ ಸೂಚನಾ ಫಲಕವನ್ನು ಅಳವಡಿಸಲಾಗುತ್ತಿದೆ.
8. ವಲಯಗಳಲ್ಲಿ ಕಾಲಭೈರವೇಶ್ವರ ರಾತ್ರಿ ಗಸ್ತು ತಂಡವನ್ನು ರಚಿಸಿಕೊಂಡು ನಿರಂತರವಾಗಿ ಗಸ್ತು ಸಂಚರಿಸಿ ಕಾಡಾನೆ ಹಾವಳಿಯನ್ನು ನಿಯಂತ್ರಿಸುವ ಬಗ್ಗೆ ಈಗಾಗಲೇ ಕ್ರಮಕೈಗೊಳ್ಳಲಾಗಿದೆ.
9. ಕಾಡಾನೆ ಹಾವಳಿ ಇರುವ ಗ್ರಾಮಗಳಲ್ಲಿ ಸ್ಥಳೀಯ ಗ್ರಾಮಸ್ಥರ, ಅಧಿಕಾರಿಗಳ ಸಿಬ್ಬಂದಿಗಳ ವಾಟ್ಸಪ್ ಗ್ರೂಪ್ ರಚಿಸಿ, ಆನೆ ಹಾವಳಿ ಬಗ್ಗೆ ಸಂದೇಶವನ್ನು ಸ್ಥಳೀಯರಿಗೆ ರವಾನಿಸಲು ಕ್ರಮಕೈಗೊಳ್ಳಲಾಗಿದೆ.
10. ಕಾಡಾನೆಗಳ ದಾಳಿಯನ್ನು ತಡೆಗಟ್ಟಲು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಉಪ್ಪಿನಂಗಡಿ, ಪುತ್ತೂರು, ಪಂಜ, ಸುಳ್ಯ ಮತ್ತು ಸುಬ್ರಹ್ಮಣ್ಯ ವ್ಯಾಪ್ತಿಗೆ ಒಳಪಡುವ 95.00 ಕಿ.ಮೀ. ಉದ್ದದ ಆನೆ ಸಂಚರಿಸುವ ನೈಸರ್ಗಿಕ ಪಥದ ಇಕ್ಕೆಲಗಳಲ್ಲಿ ಜನವಸತಿ ಪ್ರದೇಶ ಹಾಗೂ ಕೃಷಿ ಚಟುವಟಿಕೆಗಳಿಗೆ ಕಾಡಾನೆಗಳ ದಾಳಿಯನ್ನು ನಿಯಂತ್ರಿಸಲು ಅನುವಾಗುವಂತೆ *"ದಕ್ಷಿಣ ಕನ್ನಡ ಜಿಲ್ಲಾ ಆನೆ ಕಾರ್ಯಪಡೆ"* ಯನ್ನು ರಚಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

ತಂತ್ರಜ್ಞಾನ ಬಳಕೆ:

- ವಿವಿಧ ವಿಭಾಗಗಳಿಂದ ಲಭ್ಯವಾಗುವ ಮಾಹಿತಿಯನ್ನು ರಿಯಲ್-ಟೈಮ್‌ನಲ್ಲಿ ಸಂಗ್ರಹಿಸಿ, ವಿಶ್ಲೇಷಿಸಿ, ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ಹಾಗೂ ಕ್ಷೇತ್ರ ಮಟ್ಟದ ಚಟುವಟಿಕೆಗಳನ್ನು ಸಮನ್ವಯಗೊಳಿಸಿ, ತುರ್ತು ಘಟನೆಗಳಿಗೆ ತಕ್ಷಣ ಪ್ರತಿಕ್ರಿಯಿಸಲು ಕೇಂದ್ರ ಸ್ಥಾನದಲ್ಲಿ ಸಂಯೋಜಿತ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್(ICCC) ಹಾಗೂ 11 ವಿಭಾಗಗಳಲ್ಲಿ ವಿಭಾಗೀಯ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್(DCCC) ಸ್ಥಾಪಿಸಲಾಗುತ್ತಿದೆ.
- ರೇಡಿಯೋ ಕಾಲರ್ ಅಳವಡಿಸಿರುವ ಕಾಡಾನೆ, ಹುಲಿ, ಚಿರತೆಗಳ ಚಲನ-ವಲನಗಳನ್ನು ದಿನನಿತ್ಯ ಗಮನಿಸಲು ಇಲಾಖಾವತಿಯಿಂದ "ಹೆಜ್ಜೆ" ಎಂಬ ಡ್ಯಾಶ್ ಬೋರ್ಡ್‌ನ್ನು ತಯಾರಿಸಲಾಗಿದೆ.
- ಕಾಡಂಚಿನ ಗ್ರಾಮಗಳಲ್ಲಿ ವನ್ಯಪ್ರಾಣಿಗಳು ಬಂದಂತಹ ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು Advance alert system ಅನ್ನು ತಯಾರಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ನೇರವಾಗಿ ಸಂದೇಶಗಳನ್ನು ಕಳುಹಿಸಲಾಗುತ್ತಿದೆ.
- ಕಾಡಾನೆ ಇರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು ಡಿಜಿಟಲ್ ಬೋರ್ಡ್‌ಗಳನ್ನು ಅಳವಡಿಸಲಾಗಿದೆ.
- ಅರಣ್ಯದಂಚಿನ ಆಯ್ದ ಪ್ರದೇಶಗಳಲ್ಲಿ "AI" Based Camera ಗಳನ್ನು ಅಳವಡಿಸಲಾಗಿದ್ದು, ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ.
- ಡ್ರೋನ್‌ಗಳ ಮುಖಾಂತರ ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ.
- ಇ-ಪರಿಹಾರ: ಈ ಆನ್‌ಲೈನ್ ಅಪ್ಲಿಕೇಶನ್ ಬೆಳೆ, ಆಸ್ತಿ ಮತ್ತು ಜೀವಹಾನಿಗಳಿಗೆ ಪರಿಹಾರದ ಪ್ರಕರಣಗಳನ್ನು ಪ್ರಕ್ರಿಯೆಗೊಳಿಸುತ್ತದೆ, ಪರಿಹಾರ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ ಮತ್ತು ಆಡಳಿತ ವಿಳಂಬವನ್ನು ಕಡಿಮೆ ಮಾಡುತ್ತದೆ. ಅಪ್ಲಿಕೇಶನ್ ನಲ್ಲಿ ದಾಖಲಿಸಲಾದ Back end Data ದಿಂದ ಸಂಘರ್ಷದ ಕಾರಣಗಳು, ಹೆಚ್ಚಿನ ಸಂಘರ್ಷದ ಪ್ರದೇಶಗಳು ಮತ್ತು ಸಂಘರ್ಷ-ಉಂಟುಮಾಡುವ ಪ್ರಾಣಿಗಳನ್ನು ವಿಶ್ಲೇಷಿಸಲು ಸಹಾಯ ಮಾಡುತ್ತದೆ.

ಸಂಖ್ಯೆ: ಅಪಜೀ 359 ಎಫ್‌ಡಬ್ಲ್ಯೂ ಎಲ್ 2025

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು